**ದಿಃ 11.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ.ಸಿ.ಎಸ್. ವಕೀಲರಿಂದ**

ಸ.ನಂ.269/1 ಈಗ 2 ಎಕರೆ 22 ಗುಂಟೆ ಇರುತ್ತದೆ. ಈ ಜಮೀನಿನ ಪೂರ್ವಕ್ಕೆ ಬಂಡಿ ದಾರಿ, ಪಶ್ಚಿಮಕ್ಕೆ ಆದಿ ಲಕ್ಷ್ಮಮ್ಮ ಮತ್ತು ಕೆ.ವಿ.ವೆಂಕಟಶಿವಾರೆಡ್ಡಿ ರವರ ಜಮೀನು, ಉತ್ತರಕ್ಕೆ ಟಿ.ನರಸಾರೆಡ್ಡಿ ಮತ್ತು ಕೆರಪ್ಪನವರ ನರಸಪ್ಪನವರ ಜಮೀನು ಮತ್ತು ದಕ್ಷಿಣಕ್ಕೆ ಗಂಗಸಂದ್ರದ ಗಡಿ ಬರುತ್ತದೆ. ಸ.ನಂ.269 ಒಟ್ಟು ಎಷ್ಟು ಹಿಸ್ಸೆಗಳಾಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ದಿನಾಂಕ 06.03.1948 ರಲ್ಲಿ ಕೆ.ವಿ.ವೆಂಕಟರಮಣಪ್ಪ ನವರು 3 ಎಕರೆ 11 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ. ಯಾರಿಂದ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ನಾರಾಯಣರೆಡ್ಡಿಯವರಿಂದ ವೈ.ಎನ್.ನಾರಾಯಣರೆಡ್ಡಿಯವರು 1963 ರಲ್ಲಿ 5 ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿದ್ದರು. ಅದರ ಸ.ನಂ.269/2 ಆಗಿರುತ್ತದೆ. ಸ. ನಂ.269/2 ಎ ರ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ನೀಡಿರುವು ದಿಲ್ಲ. 1963 ರಲ್ಲಿ ಕ್ರಯಕ್ಕೆ ಪಡೆದ ಜಮೀನಿನ ಪೂರ್ವಕ್ಕೆ ಚಿಕ್ಕ ಲಕ್ಷ್ಮಣರೆಡ್ಡಿಯವರ ಜಮೀನು, ಪಶ್ಚಿಮಕ್ಕೆ ನಂಜಾರೆಡ್ಡಿಯವರ ಜಮೀನು, ಉತ್ತರಕ್ಕೆ ಚಿಕ್ಕ ಲಕ್ಷ್ಮಣರೆಡ್ಡಿಯವರ ಜಮೀನು ಮತ್ತು ದಕ್ಷಿಣಕ್ಕೆ ಆವಲಪ್ಪನವರ ಮಗನಾದ ಪೆದ್ದಣ್ಣನ ಜಮೀನು ಬರುತ್ತದೆ.

ಸ.ನಂ.269/2 ಎ ರ ಬಗ್ಗೆ ನಾನು ಖಂಡಿಕೆ 7 ರಲ್ಲಿ ನಮ್ಮ ಅನುಭವದ ಆಧಾರದ ಮೇರೆಗೆ ಎ ಪ್ರಾಪರ್ಟಿ ಮತ್ತು ಬಿ ಪ್ರಾಪರ್ಟಿ ಎಂದು ನಾವು ಹೇಳಿರುತ್ತೇವೆ. ಸ.ನಂ.269/2 ಎ ಬಗ್ಗೆ ರತ್ನಮ್ಮ ಮತ್ತು ಮುದ್ದುಗಂಗಮ್ಮನವರು ಹದ್ದುಬಸ್ತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದರು ಎಂದು ನಾನು ನನ್ನ 10ನೇ ಖಂಡಿಕೆಯಲ್ಲಿ ತಿಳಿಸಿರುತ್ತೇನೆ. ಸದರಿ ಹದ್ದುಬಸ್ತಿಗೆ ಅವರು ಅರ್ಜಿ ಹಾಕಿದಾಗ ನನಗೆ ನೋಟೀಸು ಬಂದಿತ್ತು ನಾನು ತೆಗೆದುಕೊಂಡಿರುವುದಿಲ್ಲ, ಹಾಗೂ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ನಾನು ಉಪ್ಪು ನೇರಳೆ ಮತ್ತು

ತೆಂಗು ಹಾಗೂ ರಾಗಿಯನ್ನು ಹಾಕಿರುತ್ತೇವೆ ಎಂದು ತಿಳಿಸಿದ್ದು ಅದನ್ನು ನಮ್ಮ ತಾತನ ಕಾಲ ದಿಂದಲೂ ವ್ಯವಸಾಯ ಮಾಡಿಕೊಂಡು ಬಂದಿರುತ್ತೇವೆ, ಇದರ ಬಗ್ಗೆ ಜಿಪಿಎಸ್ ಫೋಟೋಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನಾನು ಬೆಳೆಯ ಬಗ್ಗೆ ಕಂದಾಯ ಇಲಾಖೆಯಿಂದ ಯಾವುದೇ ತೆಗೆದುಕೊಂಡು ಬಂದು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ.

ವಾದಿ ಆದಿ ಲಕ್ಷ್ಮಮ್ಮನವರ ಗಂಡನಾದ ಶ್ರೀಯುತ ವೆಂಕಟಶಿವಾರೆಡ್ಡಿಯವರ ಸಮಾಧಿಯು ಇರುತ್ತದೆ ಎಂದು ತಿಳಿಸಿದ್ದು ಅದು ಜಮೀನಿನ ಉತ್ತರದ ಕಡೆ ಇರುತ್ತದೆ ರಸ್ತೆಯ ಪಕ್ಕದಲ್ಲಿ ಬರುತ್ತದೆ. ನಮ್ಮ ಜಮೀನಿನಲ್ಲಿ ಟ್ರಾನ್ಸ್‌ಫಾರ್ಮ ಇರುತ್ತದೆ ಎಂದು ಹೇಳಿದ್ದು ಇದರ ಬಗ್ಗೆ ಕೆಇಬಿ ಯಿಂದ ಯಾವುದೇ ದಾಖಲೆಯನ್ನು ತೆಗೆದುಕೊಂಡು ಬಂದು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ನಾವು ಜಮೀನಿನಲ್ಲಿ 12 ವರ್ಷಗಳ ಮೊದಲಿನಿಂದಲೂ ಸ್ವಾಧೀನಾನುಭವದಲ್ಲಿರುತ್ತೇವೆ ಎಂದು ತಿಳಿಸಿದ್ದು ಅದರ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ.

ಪ್ರತಿವಾದಿ 1 ಮತ್ತು 2 ರವರು ನಮ್ಮ ಸ್ವಾಧೀನಾನುಭವಕ್ಕೆ ತೊಂದರೆ ಕೊಡುತ್ತಾರೆ ಎಂದು ನಾನು ಪೋಲಿಸ್ ಠಾಣೆಗೆ ಹೋಗಿ ವರದಿಯನ್ನು ನೀಡಿದ್ದು ಪೋಲಿಸರು ಠಾಣೆಗೆ ಕರೆಯಿಸಿ ವಿಚಾರ ಮಾಡಿ ಇದು ಸಿವಿಲ್ ವ್ಯಾಜ್ಯ ಇರುತ್ತದೆ, ನ್ಯಾಯಾಲಯದಲ್ಲಿ ಹೋಗಿ ತೀರ್ಮಾನ ಮಾಡಿಕೊಳ್ಳಿ ಎಂದು ತಿಳಿಸಿದ್ದರು. ಸ.ನಂ.269/2 ಎ ಯ ಜಮೀನಿನ ಮೂಲ ಮಾಲೀಕರು ಪ್ರತಿವಾದಿ 3 ರಿಂದ 5 ಎನ್ನುವುದು ಸರಿ.

ಸ.ನಂ.269/2 ಎ ಯ ಜಮೀನಿನ ಬಗ್ಗೆ ಪ್ರತಿವಾದಿ 1 ಮತ್ತು 2 ರವರಿಗೆ ಡಾಃ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಅಭಿವೃದ್ಧಿ ನಿಗಮದ ಮುಖೇನ ಪ್ರತಿವಾದಿ 3 ರಿಂದ 5 ರವರು ನೊಂದಣಿ ಪತ್ರದ ಮೂಲಕ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಭೂ ಒಡೆತನ ಯೋಜನೆಯಡಿಯಲ್ಲಿ ಜಮೀನಿನ ಮಂಜೂರಾತಿಗೆ ಪ್ರತಿವಾದಿ 1 ಮತ್ತು 2 ರವರು ಅರ್ಜಿ ಸಲ್ಲಿಸಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಸದರಿ ಸ್ವಾಧೀನಾದ

ಆಧಾರದ ಮೇರೆಗೆ ಸರ್ಕಾರದವರು ಅವರಿಗೆ ಕ್ರಯ ಪತ್ರ ಮಾಡಿಕೊಟ್ಟಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆಯುತ್ತಾ ಅವರು ಎಂದೂ ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

ರೆವಿನ್ಯೂ ಅಧೀಕ್ಷಕರು ಸ್ಥಳಕ್ಕೆ ಬಂದು ಒಂದು ಮಹಜರ್ ಬರೆದಿದ್ದರು ಎಂದರೆ ಸರಿಯಲ್ಲ. ಸದರಿ ಕ್ರಯದ ಆಧಾರದ ಮೇರೆಗ ಸರ್ವೆ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಕ್ರಯದ ಆಧಾರದ ಮೇರೆಗೆ ಪಹಣಿ ಬರುತ್ತಿದೆ ಎಂದರೆ ಸಾಕ್ಷಿಯು ಅವರಿಗೆ ಮಾರಾಟ ಮಾಡಿವರಾಗಲೀ ಹಾಗೂ ಕ್ರಯಕ್ಕೆ ಪಡೆದವರಾಗಲೀ ಸ್ವಾಧೀನಾನುಭವದಲ್ಲಿ ಇರುವುದಿಲ್ಲ.

ಈ ದಾವೆಯಲ್ಲಿ ಯಾವುದೇ ವಿಚಾರ ನನಗೆ ಗೊತ್ತಿರುವುದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
ಹಿರಿಯ ಶ್ರೇಣಿ ನ್ಯಾಯಾಧೀಶರು
ಗೌರಿಬಿದನೂರು.